ಎನ್. ಜಗನ್ನಾಥ ಪ್ರಕಾಶ್

# ರಂಗದ ಆಚೆಗೂ ನಾಯಕರಾದ

# ಚಿಂದೋಡಿ ವೀರಪ್ಪ



ಕೀರ್ತನೆ, ವಚನ, ತತ್ತ್ವಪದ ಹಾಗೂ ಶಾಸ್ತ್ರೀಯ ಕೃತಿಗಳನ್ನೂ ಸುಶ್ರಾವ್ಯವಾಗಿ ಹಾಡುವ ಜೊತೆಗೆ, ಗಮನ ಸೆಳೆಯುವ ಸಂಭಾಷಣೆಗಳ ಮೂಲಕ ಕನ್ನಡ ವೃತ್ತಿರಂಗಭೂಮಿಯಲ್ಲಿ ಖ್ಯಾತಿ ಪಡೆದವರು ಚಿಂದೋಡಿ ವೀರಪ್ಪ.

ಅವರ ತಂದೆ ಶಾಂತವೀರಪ್ಪ ಕೂಡ ರಂಗ ಕಲಾವಿದರಾಗಿ ಹೆಸರು ಪಡೆದವರು. ಚಿಕ್ಕಂದಿನಿಂದಲೂ ರಂಗಭೂಮಿಯ ಒಡನಾಟವಿದ್ದ ವೀರಪ್ಪ, ಶಾಲೆಯಲ್ಲಿ ಕಲಿತಿದ್ದು ಕಡಿಮೆಯೇ. ಎಳೆಯ ವಯಸ್ಸಿನಲ್ಲೇ ರಂಗ ಪ್ರಪಂಚದ ಒಡನಾಟ ಹೊಂದಿದ್ದ ಅವರು, ಬಹುಬೇಗ ರಂಗಕಲಾವಿದನಾಗಿ ಗುರುತಿಸಿಕೊಂಡರು.

ಅತ್ಯುತ್ತಮ ಮಾತುಗಾರ, ಒಳ್ಳೆಯ ಗಾಯಕ ಎಂದೇ ಮನೆಮಾತಾಗಿದ್ದ ವೀರಪ್ಪನವರ ನೈಜ ಪ್ರತಿಭೆ ಮೊದಲಿಗೆ ಅನಾವರಣಗೊಂಡಿದ್ದು ತಂದೆಯ ನಾಟಕ ಕಂಪನಿಯಲ್ಲಿಯೇ. ಬಾಲ ಪಾತ್ರಗಳಿಗೆ ಜೀವ ತುಂಬುತ್ತಲೇ ಪ್ರಮುಖ ಪಾತ್ರಗಳ ಆಳ–ಅಗಲ ಅರಿತರು. ನಂತರ ಬೇರೆ ಬೇರೆ ಕಂಪನಿಗಳು ಅವರನ್ನು ಕರೆದು ಅವಕಾಶಗಳನ್ನು ಕೊಟ್ಟವು. ಅವುಗಳಲ್ಲಿ ಗೋಕಾಕ ಹಾಗೂ ಹಲಗೇರಿ ಕಂಪನಿಗಳು ಮುಖ್ಯವಾದವು.